# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರಃ 101-2024**

ಸರ್ಕಾರದ ಪರ
ಕುಂದಾಪುರ ಟ್ರಾಫಿಕ್ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ಸತೀಶ್ ಮಡಿವಾಳ ಮತ್ತು ಇತರರು --- ಆರೋಪಿತರು

**ಃದೋಷಾರೋಪಣೆಃ**

ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

1.ಸತೀಶ್ ಮಡಿವಾಳ, 35 ವರ್ಷ,
ತಂದೆಃ ನಾರಾಯಣ,
ವಾಸಃ ಶ್ರೀ ಕಾಳಿಕಾಂಬ ನಿಲಯ,
ಕೆರೆಬೆಟ್ಟು, ಜಪ್ತಿ ಅಂಚೆ ಮತ್ತು ಗ್ರಾಮ,
ಕುಂದಾಪುರ ತಾಲೂಕು.

2. ಮಧುರ, 20 ವರ್ಷ,
ತಂದೆಃ ದಿ. ಮಂಜುನಾಥ ಮಡಿವಾಳ,
ವಾಸಃ ಮಧುರ ರಮ್ಯ,
ಜನತಾ ಕಾಲೋನಿ, ಜಪ್ತಿ ಅಂಚೆ ಮತ್ತು ಗ್ರಾಮ,
ಕುಂದಾಪುರ ತಾಲೂಕು.

ಕುಂದಾಪುರ ರೂರಲ್ ಪೋಲಿಸ್ ಠಾಣಾ ಸರಹದ್ದಿನಲ್ಲಿ, ದಿ. 28.09.2023 ರಂದು ಬೆಳಿಗ್ಗೆ 10.30 ಗಂಟೆಗೆ ಚಾ.ಸಾ.1 ನೇ ರವರ ಮನೆಯ ತಂತಿ ಬೇಲಿಯನ್ನು ಹಾರಿಕೊಂಡು ಮನೆಯ ಅಂಗಳಕ್ಕೆ ಬಂದಿದ್ದನ್ನು ನೋಡಿ ಚಾ.ಸಾ.1 ನೇ ರವರು ಯಾರು ನೀನು, ಏಕೆ ಬೇಲಿಯನ್ನು ಹಾರಿ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ 34ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಗೇಟಿನ ಮೂಲಕ ಬರಲು ಆಗುವುದಿಲ್ಲವೇ ಎಂದು ಕೇಳಿದಾಗ 2 ನೇ ಆರೋಪಿತರಾದ ನೀವು ತಾನು ಬೆಳೆ ಸಮೀಕ್ಷೆ ಮಾಡಲು ಬಂದಿರುತ್ತೇನೆ ಎಂದಿದ್ದು ಆಗ ಚಾ.ಸಾ.1 ನೇರವರು ಸಮೀಕ್ಷೆ ಮಾಡಲು ತನ್ನ ಜಾಗವೇನು ಸರ್ಕಾರಿ ಜಾಗವಾ, ಯಾಕೆ ನನಗೆ ಮೊದಲೇ ಇಂಟಿಮೇಶನ್ ಮಾಡಿ ಬಂದಿರುವುದಿಲ್ಲ. ಎಂದು ಕೇಳಿದಾಗ 2 ನೇ ಆರೋಪಿಯು ಬೇವರ್ಸಿ, ಸೂಳೆಮಗನೆ, ನೀನೇನು ಕೇಳುವುದು, ನೀನು ಮುಚ್ಕೊಂಡು ಒಳಗಡೆ ಹೋಗಿ ಮಲಗಿಕೋ ಎಂದು 1 ನೇ ಆರೋಪಿತರಾದ ನೀವು ಏಕಾಏಕಿ ಬೋಳಿಮಗನೆ ಬಟ್ಟಾ ನೀನೇನು ನಮಗೆ ಕೇಳುತ್ತೀಯಾ ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 1 ನೇ ಆರೋಪಿತರಾದ ನೀವು ಚಾ.ಸಾ.1 ನೇಯವರಿಗೆ ಏನು ಬಹಳ ಹಾರಾಡುತ್ತಿದ್ದಿಯಲ್ಲಾ ಎಂದು ಹೇಳಿ ಕೈಯಿಂದ ಮುಷ್ಠಿಕಟ್ಟಿ ಹೊಡೆದು ಸಾಮಾನ್ಯ ಸ್ವರೂಪದ ನೋವನುಂಟು ಮಾಡಿದ್ದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಆ ಪೈಕಿ 1 ನೇ ಆರೋಪಿತರಾದ ನೀವು ಅಲ್ಲೆ ಇರುವ ಒಂದು ಕೊಡೆಯಿಂದ ಚಾ.ಸಾ.1 ನೇಯವರ ಬೆನ್ನಿಗೆ ಹೊಡೆದುಸಾಮಾನ್ಯ ಸ್ವರೂಪದ ನೋವನುಂಟು ಮಾಡಿದ್ದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 1 ನೇ ಆರೋಪಿತರಾದ ನೀವು ಚಾ.ಸಾ.1 ನೇಯವರಿಗೆ ಏನು ಬಹಳ ಹಾರಾಡುತ್ತಿದ್ದಿಯಲ್ಲಾ ಎಂದು ಹೇಳಿ ಕೈಯಿಂದ ಮುಷ್ಟಿಕಟ್ಟಿ ಚಾ.ಸಾ.1 ನೇಯವರ ಮೂಗಿಗೆ ಹೊಡೆದು ಚಾ.ಸಾ.1 ನೇಯವರ ಹಲ್ಲು ಮುರಿದು ಹೋಗಿ ಮೂಗು, ಬಾಯಿಂದ ರಕ್ತ ಬಂದು ಸಾಮಾನ್ಯ ಸ್ವರೂಪದ ನೋವನುಂಟು ಮಾಡಿದ್ದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಕೊಡೆಯನ್ನು ಬಿಸಾಕಿ ಅಲ್ಲ್ನೆ ಬಿದ್ದುಕೊಂಡಿದ್ದ ಒಂದು ಕೋಲನ್ನು ಹಿಡಿದು ಸೂಳೇಮಗನೇ ಬಟ್ಟ ಇನ್ನು ನಮ್ಮ ಸುದ್ದಿಗೆ ಬಂದರೆ ನಿನ್ನನ್ನು ಕೊಂದೆ ಹಾಕುತ್ತೇವೆ ನೋಡು ಎಂದು ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

7. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಆ ಪೈಕಿ 2 ಆರೋಪಿತರಾದ ನೀವು ಹೊಡಿ ಆ ಸೂಳೆಮಗನಿಗೆ ಬಿಡಬೇಡ ಮಾವ ಎಂದು ಹೇಳಿ ನೀವು ಪ್ರೇರೇಪಣೆ ನೀಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 114 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ.19.03.2025.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಕುಂದಾಪುರ.ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :101-2024**

ಫಿರ್ಯಾದುದಾರರು : ಸರಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಠಾಣಾ ಪೋಲಿಸರು,

**- ವಿರುದ್ಧ-**

ಆರೋಪಿ : **1.**ಸತೀಶ್ ಮಡಿವಾಳ, ತಂದೆಃ ನಾರಾಯಣ,

**1.** ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣಾ ಸಾರಾಂಶವನ್ನು ಅರ್ಥಮಾಡಿಕೊಂಡಿರಾ**?**

ಉ.

**2.** ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.**?**

ಉ.

ಮೇಲ್ಕಂಡ ದೋಷಾರೋಪಣಾ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.

ಕುಂದಾಪುರ.ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ : 101-2024**

ಫಿರ್ಯಾದುದಾರರು : ಸರಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಠಾಣಾ ಪೋಲಿಸರು,

**- ವಿರುದ್ಧ-**

ಆರೋಪಿ : **2.** ಮಧುರ, ತಂದೆಃ ದಿ. ಮಂಜುನಾಥ ಮಡಿವಾಳ,

**1.** ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣಾ ಸಾರಾಂಶವನ್ನು ಅರ್ಥಮಾಡಿಕೊಂಡಿರಾ**?**

ಉ.

**2.** ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.**?**

ಉ.

ಮೇಲ್ಕಂಡ ದೋಷಾರೋಪಣಾ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.